ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 4, Jan-Feb 2020, 40-47
©*IIMRD*, Mysuru

IIMRD JOURNALS

www.iimrd.com

# ಬದಲಾಗುತ್ತಿರುವ ಬುಡಕಟ್ಟು ಸಮುದಾಯದ ಲಕ್ಷಣಗಳು: ಮೈಸೂರು ನಗರದ ಬುಡಕಟ್ಟು ಸಮುದಾಯಗಳನ್ನು ಅನುಲಕ್ಷಿಸಿ

**ಡಾ.ದುಂಡಯ್ಯ**[1]

**ಪೀಠಿಕೆ**

ಪ್ರಪಂಚವೇ ಒಂದು ಬುಡಕಟ್ಟು ಸಮುದಾಯವಾಗಿದ್ದು, ಕಾಲದಿಂದ ಕಾಲಕ್ಕೆ ಸನ್ನಿವೇಶ ಮತ್ತು ಪರಿಸ್ಥಿತಿಗಳ ಬದಲಾವಣೆಗಳೊಂದಿಗೆ ನಾಗರಿಕ ಸಮಾಜಕ್ಕೆ ಅಣಿಯಾಗಿ, ನಗರ ಪಟ್ಟಣಗಳ ಹುಟ್ಟಿಗೆ ಕಾರಣವಾಗಿ, ನವಸಮಾಜದ ನಿರ್ಮಾಣಕ್ಕೆ ನಾಂದಿ ಹಾಡಿದೆ. ಪ್ರಸ್ತುತದಲ್ಲಿ ಬುಡಕಟ್ಟುಗಳು ತಮ್ಮದೇ ಆಚಾರ–ವಿಚಾರ ರೂಢಿ ಸಂಪ್ರದಾಯಗಳನ್ನು ತಮ್ಮ ಅಸ್ತಿತ್ವದ ಜೊತೆ ಜೊತೆಯಲ್ಲೇ ವಂಶ ಪಾರಂಪರ್ಯವಾಗಿ ಉಳಿಸಿಕೊಂಡು ಬೆಳೆಸಿಕೊಂಡು ಯಾವುದೇ ಕಟ್ಟುಪಾಡುಗಳಿಗೆ ರಾಜಿಯಾಗದೇ ತಮ್ಮ ಕುಲ ಪಂಚಾಯಿತಿಯ ಎಲ್ಲೆಯೊಳಗೆ ಜೀವನ ನಡೆಸುತ್ತಿರುವುದು ಇಂದಿಗೂ ಸಹ ನಾವು ಕಾಣಬಹುದು. ಮತ್ತೆ ಕೆಲವು ಬುಡಕಟ್ಟು ಸಮುದಾಯಗಳು ಆಧುನಿಕರಣದ ಸೆಳೆತದಿಂದಾಗಿ ಹಾಗೂ ಅರಣ್ಯ ನೀತಿಗಳ ಕಠಿಣ ಕ್ರಮಗಳಿಂದಾಗಿ ಕಾಡಿನಿಂದ ಒಕ್ಕಲೆದ್ದ ಬುಡಕಟ್ಟು ಸಮುದಾಯಗಳು ಅಲೆಮಾರಿಗಳಾಗಿ ನಗರ ಪಟ್ಟಣಗಳನ್ನು ಸೇರಿ ನಾಗರಿಕ ಸಮಾಜದ ಪೈಪೋಟಿಗೆ ಸವಾಲೊಡ್ಡುತ್ತಾ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಹಂತ ಹಂತವಾಗಿ ಸುಧಾರಿಸಿಕೊಂಡು ಬರುತ್ತಿರುವುದು ಮೈಸೂರು ನಗರ ಪ್ರದೇಶದಲ್ಲಿ ಕಂಡುಬರುತ್ತದೆ. ಪ್ರತಿಯೊಂದು ಬುಡಕಟ್ಟು ಸಮುದಾಯಗಳು ತಮ್ಮದೇ ಆದ ವಿಭಿನ್ನ ಲಕ್ಷಣಗಳನ್ನು ಹೊಂದಿದ್ದರೂ ಸಹ ಬುಡಕಟ್ಟು ಸಮುದಾಯಗಳೆನಿಸಿಕೊಳ್ಳಬೇಕಾದರೆ ಈ ಕೆಳಕಂಡ ಸಾಮಾನ್ಯ ಲಕ್ಷಣಗಳನ್ನು ಹೊಂದಿರಲೇಬೇಕಾಗಿದೆ. ಹಾಗಾದಾಗ ಮಾತ್ರ ಬುಡಕಟ್ಟು ಸಮುದಾಯವೆಂದು ನಿರ್ಧರಿಸಲು ಸಾಧ್ಯವೆಂದು ಹಲವು ಸಂಶೋಧನೆಗಳ ಮೂಲಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದರೇ ಪ್ರಸ್ತುತ ಸನ್ನಿವೇಶವನ್ನು ಗಮನಿಸಿ ನೋಡಿದಾಗ ಆ ಲಕ್ಷಣಗಳೆಲ್ಲವು ಹಲವು ಮಾರ್ಪಾಡುಗಳನ್ನು ಹೊಂದಿ ನಾಗರಿಕ ಸಮಾಜದ ಸೆಳೆತ ಮತ್ತು ಸಮಯ ಸಂಧರ್ಭಗಳು ಬದಲಾವಣೆಗೆ ಕಾರಣವಾಗಿ ಬುಡಕಟ್ಟು ಸಮುದಾಯಗಳು ತಮ್ಮ ಲಕ್ಷಣಗಳನ್ನು ವಿಸೃತಗೊಳಿಸಿಕೊಂಡಿವೆ ಎಂದರೆ ತಪ್ಪಾಗಲಾರದು.

ಪ್ರಸ್ತುತ ಲೇಖನದಲ್ಲಿ ಮೈಸೂರು ನಗರದಲ್ಲಿ ನೆಲೆಸಿರುವ ಬುಡಕಟ್ಟು ಸಮುದಾಯಗಳ ಜೀವನ ವಿಧಾನದಲ್ಲಾಗಿರುವ ಬದಲಾವಣೆಯನ್ನು ಕುರಿತು ವಿಶ್ಲೇಷಿಸಲಾಗಿದೆ.

---

[1] *ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ, ಮೈಸೂರು.*

**ನಿರ್ದಿಷ್ಟ ಭೂ ಪ್ರದೇಶ**

ಕಾಡು–ಮೇಡುಗಳಲ್ಲಿ, ಬೆಟ್ಟ–ಗುಡ್ಡಗಳಲ್ಲಿ, ವನಸಿರಿಯ ನೆರಳಿನಲ್ಲಿ ಬುಡಕಟ್ಟು ಸಮುದಾಯದವರು ತಮ್ಮ ನಿರ್ದಿಷ್ಟ ನೆಲೆಯನ್ನು ಕಂಡುಕೊಂಡಿರುತ್ತಾರೆ. ಇವರಲ್ಲಿ ಕೆಲವರು ಒಂದೆಡೆ ನಿಲ್ಲದೆ ಅಲೆಮಾರಿ ಜೀವನ ನಡೆಸಿದರೆ, ಮತ್ತೆ ಕೆಲವರು ವಂಶ ಪಾರಂಪರ್ಯಾವಾಗಿ ಒಂದೇ ನೆಲೆಯಲ್ಲಿ ನೆಲೆನಿಂತು ವನರಾಜನ ಮಕ್ಕಳಾಗಿ ಬದುಕು ಕಟ್ಟಿಕೊಂಡಿದ್ದಾರೆ. ತಾವು ಹುಟ್ಟಿದ ಪ್ರದೇಶದ ಬಗ್ಗೆ ಸಾಮುದಾಯಿಕ ಭಾವನೆಗಳ ಬಿಟ್ಟುಕೊಡದ ನಂಟು ಸದಾ ಜಾಗೃತವಾಗಿರುತ್ತದೆ. ಯಾವ ಬುಡಕಟ್ಟು ಸಮುದಾಯಗಳು ಹೆಚ್ಚಾಗಿ ಕಂಡುಬರುತ್ತವೆಯೊ ಆ ಪ್ರದೇಶವು ಆಯಾ ಬುಡಕಟ್ಟು ಪ್ರದೇಶವಾಗಿ ಇಂದಿಗೂ ಗುರುತಿಸುವ ಪದ್ಧತಿ ರೂಢಿಯಲ್ಲಿದೆ. ಒಂದು ಪ್ರದೇಶವನ್ನು ಹೇಳಿದ ಕೂಡಲೇ ಇಂತದ್ದೇ ಬುಡಕಟ್ಟು ಸಮುದಾಯವಿದೆ ಎಂದು ಗುರುತಿಸುವ ಮಟ್ಟಿಗೆ ಹೆಸರುವಾಸಿಯಾಗಿರುವುದು ಅತ್ಯಂತ ಗಮನಾರ್ಹ ಸಂಗತಿಯಾಗಿದೆ. ಉದಾ:ಮೇಘಾಲಯ ಮತು ಅಸ್ಸಾಂನಲ್ಲಿ ನಾಗಾ, ಖಾಸಿ, ಗಾರೋ, ನೀಲಗಿರಿ ಬೆಟ್ಟಗಳಲ್ಲಿ ತೋಡರು, ಕಾಡು (ಬೆಟ್ಟ) ಕುರುಬರು, ಆಂಧ್ರ ಪ್ರದೇಶದಲ್ಲಿ ಚೆಂಚು ಮತ್ತು ಕೊಂಡರು, ಗೊಂಡಾರಣ್ಯದಲ್ಲಿ ಗೊಂಡರು. ಹೀಗೆ ಪ್ರಾದೇಶಿಕವಾರು ಒಂದು ನಿರ್ದಿಷ್ಟ ಭೂ ಪ್ರದೇಶದಲ್ಲಿ ವಾಸಿಸುತ್ತಿರುವುದನ್ನು ನಾವು ಇಂದಿಗೂ ಕಾಣಬಹುದು. ಆದರೇ ಈ ಮೇಲಿನಂತೆ ಒಂದು ನಿರ್ದಿಷ್ಟ ಪ್ರದೇಶವನ್ನು ಗುರುತಿಸುವಾಗ ಅಥವಾ ಹೇಳುವಾಗ ಇಲ್ಲಿ ಯಾವ ಬುಡಕಟ್ಟು ಸಮುದಾಯವು ಹೆಚ್ಚಾಗಿ ನೆಲೆಸಿದ್ದಾರೆ ಎಂಬುದನ್ನು ಕರಾರುವಕ್ಕಾಗಿ ಗುರುತಿಸಿದರೂ ಸಹ ಪ್ರಸ್ತುತದಲ್ಲಿ ನಾಗರಿಕತೆ ಮತ್ತು ಅರಣ್ಯ ನೀತಿಗಳ ಪ್ರಭಾವದಿಂದಾಗಿ ಹಾಗೂ ವಲಸೆ ಪ್ರವೃತಿಯ ಚಾಲಿನಿಂದಾಗಿ ಒಂದು ನಿರ್ಧಿಷ್ಟ ಪ್ರದೇಶಕ್ಕೆ ಸಿಮಿತವಾಗಿದ್ದ ಬುಡಕಟ್ಟು ಸಮುದಾಯಗಳು ನಗರ ಪಟ್ಟಣಗಳನ್ನು ಸೇರಿ ನಾಗರಿಕ ಬದುಕಿನ ಜೊತೆ ಸೆಣಸಾಡುತ್ತಿರುವುದು ಮತ್ತು ಪೈಪೋಟಿ ನಡೆಸುತ್ತಿರುವುದನ್ನ ಅಲ್ಲಗಳೆಯುವಂತಿಲ್ಲ.

ನಗರ ಪಟ್ಟಣಗಳಲ್ಲಿ ನಗರವಾಸಿಗಳು ಮಾತ್ರವಿರದೆ ಇಲ್ಲಿ ಬುಡಕಟ್ಟು ಸಮುದಾಯಗಳು ಸಹ ಇದ್ದಾರೆ ಎಂಬುದು ನನ್ನ ಸಂಶೋಧನೆಯ ಮೂಲಕ ತಿಳಿದು ಕೊಳ್ಳಲಾಯಿತು. ಇವರಲ್ಲಿ ಮೇದಾರರು, ಕೊರಮರು, ಕುರುಬರು ಸೋಲಿಗರು ಮುಂತಾದವರು ನಿರ್ದಿಷ್ಟ ಪ್ರದೇಶಗಳಲ್ಲಿ ಅಲ್ಲದೆ ನಗರ ಪ್ರದೇಶದ ನಿರ್ದಿಷ್ಟ ಕಾಲೋನಿಗಳಲ್ಲಿ ವಾಸವಾಗಿರುವುದು ವಿಶಿಷ್ಟವೆನಿಸಿದೆ. ಉದಾ: ಸೋಲಿಗರ ಕಾಲೋನಿ, ಮೇದಾರರ ಕಾಲೋನಿ ಹಾಗೂ ಕರ್ನಾಟಕ ಸರ್ಕಾರವು ಬುಡಕಟ್ಟು ಸಮುದಾಯಗಳಿಗೆಂದೆ ನಿರ್ಮಿಸಿರುವ ಏಕಲವ್ಯನಗರ ಮುಂತಾದವನ್ನು ಉದಾಹಾರಿಸ ಬಹುದು. ಮೈಸೂರು ನಗರವೊಂದರಲ್ಲೆ ಸುಮಾರು 12 ಬುಡಕಟ್ಟು ಸಮುದಾಯಗಳು ಸುಮಾರು 150 ವರ್ಷಗಳ ಹಿಂದೆಯೇ ಬಂದು ನೆಲೆಯುರಿರುವ ದಾಖಲೆಗಳು ಲಭ್ಯವಾಗಿರುವಾಗ ಇಲ್ಲಿ ನಿರ್ಧಿಷ್ಟ ಭೂಪ್ರದೇಶದ ಮಾತು ಹಂತ ಹಂತವಾಗಿ ಕಳೆಗುಂದುತ್ತಿರುವುದು ಸ್ಪಷ್ಟವಾಗಿ ಕಾಣತ್ತದೆ.

**ವಿಶಿಷ್ಟ ನಾಮಧೇಯ**

ಜಗತ್ತಿನ ಪ್ರತಿಯೊಬ್ಬ ಮನುಷ್ಯನಿಗೂ ಒಂದೊಂದು ಹೆಸರಿರುವಂತೆ ಪ್ರತಿಯೊಂದು ಜಾತಿ ಸಮುದಾಯಗಳಿಗೂ ವಿಶಿಷ್ಟವಾದ ಹೆಸರನ್ನು ಹೊಂದಿರುವುದು ವಿಶೇಷವಾಗಿದೆ. ಇದು ಬುಡಕಟ್ಟು

ಸಮುದಾಯಗಳಿಗೂ ಅನ್ವಯವಾಗುತ್ತಿದ್ದು, ಪ್ರತಿಯೊಂದು ಬುಡಕಟ್ಟು ಸಮುದಾಯಗಳು ತಮ್ಮ ತಮ್ಮದೇ ಆದ ವಿಶಿಷ್ಟ ಹೆಸರುಗಳಿಂದ ಗುರುತಿಸಿಕೊಂಡಿರುವುದು ಕಂಡುಬರುತ್ತದೆ. ಅಂತಹ ವಿಶಿಷ್ಟ ನಾಮಧೇಯವನ್ನು ಹೊಂದಿರುವ ಬುಡಕಟ್ಟು ಸಮುದಾಯಗಳನ್ನು ಈ ಕೆಳಕಂಡಂತೆ ಕಾಣಬಹುದು. ಸೋಲಿಗ, ಜೇನುಕುರುಬ, ಬೆಟ್ಟಕುರುಬ, ಯರವ, ಹಕ್ಕಿಪಿಕ್ಕಿ, ಸಂತಾಲರು, ಮುಂಡ, ಗೊಂಡ, ಕೋಟ, ಬಡಗ, ಉರಾಳಿ, ತೋಡ, ಕೊರಮ ಇತ್ಯಾದಿ ಬುಡಕಟ್ಟುಗಳು ಭಾರತದಲ್ಲಿ ಇರುವಂತೆ ಜಗತ್ತಿನಾದ್ಯಂತ ಬೇರೆ ಬೇರೆ ಕಡೆಗಳಲ್ಲಿ ಕಾಣಬರುವ ಬುಡಕಟ್ಟು ಸಮುದಾಯಗಳೂ ಸಹ ತಮ್ಮದೇ ಆದ ವಿಶಿಷ್ಟ ಹೆಸರುಗಳನ್ನು ಹೊಂದಿದ್ದಾರೆ. ಪ್ರಸ್ತುತ ಮೈಸೂರು ನಗರದ ಸೋಲಿಗರಲ್ಲಿ ಕನ್ನಡ ಸೋಲಿಗ, ತೆಲುಗು ಸೋಲಿಗ ಎಂಬ ಎರಡು ಗುಂಪುಗಳಿದ್ದು ಅವರಾಡುವ ಭಾಷೆಗಳಿಗೆ ಅನುಗುಣವಾಗಿ ವಿಭಾಗಿಸಿಕೊಂಡಿರುವುದು ವಿಶೇಷವಾಗಿದೆ. ಇದೆ ರೀತಿಯಾಗಿ ಹಲವು ಬುಡಕಟ್ಟು ಸಮುದಾಯದವರು ಸಹ ತಮ್ಮತಮ್ಮ ವಿಶೇಷತೆಗೆ ಮತ್ತು ಪ್ರಾಧನ್ಯತೆಯ ಆದಾರದ ಮೇಲೆ ವಿಭಾಗಿಸಿಕೊಂಡಿರುವುದು ಕಂಡುಬಂದಿದೆ.

**ನಿರ್ದಿಷ್ಟ ಭಾಷೆ**

ಬುಡಕಟ್ಟು ಸಮುದಾಯದವರು ತಮ್ಮದೇ ಭಾಷೆಯನ್ನು ಹೊಂದಿದ್ದು, ಅದು ಅವರ ಸಮುದಾಯವನ್ನು ಪ್ರತಿನಿಧಿಸುತ್ತದೆ. ಇತರರು ಇವರ ಭಾಷೆಯನ್ನು ಅಷ್ಟು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಮಾತ್ರವಲ್ಲದೆ ಬುಡಕಟ್ಟು ಸಮುದಾಯದವರ ಭಾಷೆಗಳಲ್ಲಿ ಭಿನ್ನತೆಯನ್ನು ಮತ್ತು ಪ್ರತ್ಯೇಕತೆಯನ್ನು ಹೊಂದಿದ್ದು, ಆಯಾ ಸಮುದಾಯವನ್ನು ಪ್ರತಿನಿಧಿಸುತ್ತದೆ. ದಕ್ಷಿಣ ಭಾರತದ ಬುಡಕಟ್ಟು ಜನಾಂಗಗಳ ಭಾಷೆ, ದ್ರಾವಿಡ ಭಾಷಾ ಕುಟುಂಬ ವರ್ಗಕ್ಕೆ ಸೇರಿದ್ದು, ಬಹುತೇಕ ಬುಡಕಟ್ಟು ಭಾಷೆಗಳಿಗೆ ಲಿಪಿಯಿಲ್ಲ. ಭಾಷೆಯ ಆಧಾರದ ಮೇಲೆ ಆಸ್ಟ್ರೋ–ಏಸಿಯಾಟಿಕ್ ಭಾಷಾ ಕುಟುಂಬದಲ್ಲಿ: ಕೋಳಿ, ಮುಂಡ ಹಾಗೂ ಖಾಸೀ ಸಮುದಾಯಗಳು, ದ್ರಾವಿಡ ಭಾಷಾ ಕುಟುಂಬದಲ್ಲಿ: ರಾಜಗೊಂಡ, ಸಂತಾಲ, ಕೋಯಾ, ಕೊರಮ, ಸೋಲಿಗ, ಜೇನುಕುರುಬ, ಬೆಟ್ಟಕುರುಬ ಬುಡಕಟ್ಟು ಸಮುದಾಯಗಳು, ಟಿಬೆಟೋ – ಚೈನಾ ಭಾಷಾ ಕುಟುಂಬದಲ್ಲಿ: ನಾಗ, ಗಾರೋ, ಡೆಪ್ಲಾ ಮುಂತಾದ ಬುಡಕಟ್ಟು ಸಮುದಾಯಗಳು ಕಂಡುಬರುತ್ತಾರೆಂದು ಮಾನವಶಾಸ್ತ್ರಜ್ಞರು ಮತ್ತು ಭಾಷಾತಜ್ಞರು ತಿಳಿಸಿದ್ದಾರೆ.

ಬುಡಕಟ್ಟು ಸಮುದಾಯಗಳಲ್ಲಿ ಅವರದ್ದೇ ಆದ ಪ್ರತ್ಯೇಕ ಭಾಷೆಯನ್ನು ಹೊಂದಿದ್ದು ಜೇನುಕುರುಬ ಬುಡಕಟ್ಟು ಸಮುದಾಯ ಮಾತನಾಡುವ ಭಾಷೆಯನ್ನು ಜೇನುಕುರುಬ ಭಾಷೆಯೆಂತಲೂ, ಬೆಟ್ಟಕುರುಬರು ಮಾತನಾಡುವ ಭಾಷೆಯನ್ನು ಬೆಟ್ಟಕುರುಬ ಭಾಷೆಯೆಂತಲೂ, ಕೊರಗರು ಮಾತನಾಡುವ ಭಾಷೆಯನ್ನು ಕೊರಗ ಭಾಷೆಯೆಂತಲೂ ಲಂಭಾಣಿಯವರು ಮಾತನಾಡುವ ಭಾಷೆಯನ್ನು ಲಂಬಾಣಿ ಭಾಷೆಯೆಂತಲೂ ಕರೆಯುತ್ತಾರೆ. ಅದರಂತೆ ಸೋಲಿಗರು ಮಾತನಾಡುವ ಭಾಷೆಯನ್ನು ಸೋಲಿಗರ ಭಾಷೆಯೆಂತಲೂ ಅಥವಾ ಸೋಲಿಗನುಡಿಯೆಂತಲೂ ಕರೆಯುತ್ತಾರೆ. ಬುಡಕಟ್ಟು ಸಮುದಾಯಗಳು ಪ್ರತ್ಯೇಕವಾದ ಭಾಷೆಯನ್ನು ಹೊಂದಿದ್ದರೂ ಸಹ ಹಲವು ಬುಡಕಟ್ಟು ಭಾಷೆಗಳು ನಶಿಸಿಹೋಗಿವೆ ಮತ್ತೆ

ಕೆಲವು ಅಳಿವಿನಂಚಿನಲ್ಲಿದ್ದು, ಅದನ್ನು ಉಳಿಸುವ ಕಾರ್ಯ ನಡೆಯಬೇಕಿದೆ. ಆ ಭಾಷೆಗಳಿಗೆ ಪ್ರಧಾನ ಭಾಷೆಗಳ ಹೊಡೆತದಿಂದ ತಪ್ಪಿಸಿ ಉಳಿಸುವುದು ಅನಿವಾರ್ಯವಾಗಿದೆ. ಕೆಲವು ಭಾಷೆಗಳಿಗೆ ಲಿಪಿಯಿದ್ದರೆ ಮತ್ತೆ ಕೆಲವಕ್ಕೆ ಲಿಪಿಯಿಲ್ಲ. ಪ್ರಸ್ತುತ ಸನ್ನಿವೇಶದಲ್ಲಿ ಬುಡಕಟ್ಟು ಭಾಷೆಗಳು ಸಹ ಪ್ರಧಾನ ಅಥವಾ ಬಹುಜನರ ಅಥವಾ ವ್ಯವಹಾರಿಕ ಭಾಷೆಯ ಪ್ರಭಾವದಿಂದಾಗಿ ತಮ್ಮ ತಮ್ಮ ಬುಡಕಟ್ಟು ಭಾಷೆಗಳನ್ನು ಬಿಟ್ಟು ಅನಿವಾರ್ಯತೆಗೆ ಸಿಲುಕಿ ಅನ್ಯಭಾಷೆಗಳನ್ನೆ ಮಾತೃಭಾಷೆಯಾಗಿ ಸ್ವೀಕರಿಸಿರುವುದು ಮೈಸೂರು ನಗರ ಪ್ರದೇಶದಲ್ಲಿ ಕಂಡುಬಂದಿದೆ. ಅವುಗಳಲ್ಲಿ ಸೋಲಿಗ ಸಮುದಾಯದವರು ಕನ್ನಡ ಭಾಷೆಯನ್ನೆ ತಮ್ಮ ಮಾತೃ ಭಾಷೆ ಎನ್ನುವ ಮಟ್ಟಿಗೆ ಇಂದಿನ ಯುವ ಪೀಳಿಗೆಯಲ್ಲಿ ಹುಟ್ಟು ಹಾಕಿರುವುದು ಎರಡು ತಲೆಮಾರಿನ ಸಾಮಾಜಿಕ ಹೊರಾಟ ಮತ್ತು ಸಮಾಜದಲ್ಲಿ ತಮ್ಮ ಭಾಷೆಯಿಂದ ನಾಗರಿಕ ಸಮಾಜ ತಮ್ಮನ್ನು ನಡೆಸಿಕೊಂಡ ರೀತಿಯು ಅತ್ಯಂತ ಶೋಚನೀಯವಾಗಿತ್ತು ಎಂದು ತಮ್ಮ ಮಾತೃಭಾಷೆಯನ್ನೆ ಮರೆತುಬಿಟ್ಟ ದುರಂತವನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವಕ್ತೃಗಳಿಂದ ತಿಳಿದುಕೊಳ್ಳಲಾಯಿತು. **"**ಚಿಕ್ಕವರಿದ್ದಾಗ ಶಾಲೆಯಲ್ಲಿ ನಾವು ಸೋಲಿಗರೆಂದರೆ ಕಾಡುಜನ ಎಂದು ನಗುತ್ತಿದ್ದರು ಮತ್ತು ಇಲ್ಲಿನ ಜನ ನಮ್ಮನ್ನು ತಿರಸ್ಕಾರದಿಂದ ನೋಡುತಿದ್ದರು ಇದರಿಂದ ಅವಮಾನಿತರಾಗಿ ಸೇಡಿಗೆ ಮೊರೆ ಹೋಗದೆ ನಾಗರಿಕತೆಯ ಪೈಪೊಟಿಗೆ ಸವಾಲನ್ನು ಸ್ವಿಕರಿಸಿ ನಮ್ಮ ಸಂಪ್ರದಾಯಗಳನ್ನು ವಿಸ್ತರಿಸಿಕೊಂಡು ಸೋಲಿಗ ಭಾಷೆಗಿಂತ ಕನ್ನಡ ಭಾಷೆಯನ್ನೇ ಮಾತೃಭಾಷೆಯಾಗಿ ಪರಿವರ್ತಿಸಿಕೊಂಡು ಹಂತ ಹಂತವಾಗಿ ನಾಗರಿಕತೆಗೆ ಹೊಂದಿಕೊಂಡು ಜೀವನ ನಡೆಸುತ್ತಿದ್ದೇವೆ. ಎಂದು ಕೃಷ್ಣಮೂರ್ತಿ[1] ಅವರು ತಿಳಿಸಿದರು**"**. ಅವರ ಮಾತಿನಲ್ಲಿ ಅವರು ಅನುಭವಿಸಿದ ಹಸಿ ನೋವಿನ ಅಳಲು ಮತ್ತು ತಮ್ಮ ಮಾತೃ ಭಾಷೆಯನ್ನು ತಮ್ಮ ಮುಂದಿನ ಪೀಳಿಗೆಗೆ ಕಲಿಸಲು ಹಿಂಜರಿದ ಸಂದರ್ಭಗಳು ಕಣ್ಣಿಗೆ ಕಟ್ಟಿದಂತಿದೆ.

**ರಕ್ತಸಂಬಂಧ**

ಬುಡಕಟ್ಟು ಸಮುದಾಯದಲ್ಲಿ ವೈವಾಹಿಕ ಸಂಬಂಧಗಳು, ಮತ್ತಿತರ ಸಂಬಂಧಗಳು, ತಮ್ಮ ನಂಬಿಕೆ ಆಧಾರದ ಮೇಲೆ ಎಲ್ಲೆಯನ್ನು ಗುರುತಿಸಿಕೊಂಡು ಚಾಚೂ ತಪ್ಪದೆ ಪಾಲಿಸುತ್ತಾ ಬಂದಿರುವುದನ್ನು ಇಂದಿಗೂ ಸಹ ಕಾಣಬಹುದು. ಕರುಳು ಬಳ್ಳಿಯ ಸಂಬಂಧ ಅಥವಾ ರಕ್ತಸಂಬಂಧಗಳಿಗೆ ಹೆಚ್ಚಿನ ಬೆಲೆ, ಮಹತ್ವ ಮತ್ತು ಪ್ರಾಮುಖ್ಯತೆಯನ್ನು ನೀಡುತ್ತಾರೆ. ಕುಟುಂಬ, ವಂಶ, ಏಕರಕ್ತಸಂಬಂಧ, ಬಂಧುತ್ವ ಮುಂತಾದವು ರಕ್ತಸಂಬಂಧದ ಆಧಾರದ ಮೇಲೆ ರಚಿತವಾಗಿವೆ. ಒಂದು ಪ್ರೇಮದ ತಳಹದಿಯ ಮೇಲೆ ಸಹಕಾರ ಮತ್ತು ಸಂಬಂಧಗಳು ಬೆಳೆಯುತ್ತವೆ. ತಾವೆಲ್ಲರೂ ಒಡನಾಡಿಗಳು ಎಂದು ಅವರು ನಂಬಿರುತ್ತಾರೆ. ಕುಲಗಳು (clan) ಬೇರೆ ಬೇರೆ ಇದ್ದರೂ ಭ್ರಾತೃಪ್ರೇಮದ ಭಾವನೆಯು ಅವರಲ್ಲಿ ಜಾಗೃತವಿರುತ್ತದೆ. ಆದರೆ ಮೈಸೂರು ನಗರ ಪ್ರದೇಶದಲ್ಲಿ ರಾಜಕೀಯ ಪಕ್ಷಗಳ ಹಾವಳಿ ಮತ್ತು ಬುಡಕಟ್ಟು ಸಮುದಾಯಗಳ ಭಾಷೆ, ಉಪಭಾಷೆಗಳ ತಾರತಮ್ಯಗಳು ಪ್ರಾಬಲ್ಯವನ್ನು ಸಾಧಿಸಿ ಭ್ರಾತೃತ್ವವು ಸಡಿಲಗೊಂಡಿರುವುದನ್ನು ನೆನಪಿಸಿಕೊಳ್ಳಬೇಕಾಗುತ್ತದೆ.

---

[1] **ಪ್ರಾಧ್ಯಾಪಕರು, ಕೆ ಎನ್ ಪುರ. ಮೈಸೂರು.**

**ಏಕರೂಪದ ಸಂಸ್ಕೃತಿ**

ಬುಡಕಟ್ಟು ಸಮುದಾಯಗಳು ಪ್ರಕೃತಿಯ ಆರಾಧಕರಾಗಿದ್ದು ಗಿಡ ಮರ ಬಳ್ಳಿ, ಬೆಟ್ಟಗುಡ್ಡ, ಪ್ರಾಣಿಪಕ್ಷಿ, ನೆಲಜಲ, ಹೀಗೆ ಹಲವು ಪ್ರಕೃತಿಯ ಪ್ರತಿರೂಪಗಳನ್ನು ಆರಾಧಿಸಿ ಪೂಜಿಸಿ ಭಯಭಕ್ತಿಯಿಂದ ಆಚಾರ–ವಿಚಾರಗಳು, ರೂಢಿ ಸಂಪ್ರದಾಯಗಳನ್ನು ಜನನದಿಂದ ಮರಣದವರೆಗೆ, ಗರ್ಭದಿಂದ ಗೋರಿಯವರೆಗೆ ಚಾಚು ತಪ್ಪದೆ ಪಾಲಿಸಿಕೊಂಡು ಬಂದಿದ್ದು, ಮಾಟ–ಮಂತ್ರ, ಯಂತ್ರ–ತಂತ್ರ, ಪ್ರಾಣಿಬಲಿ ಮುಂತಾದವುಗಳಲ್ಲಿ ನಂಬಿಕೆಯುಳ್ಳವರಾಗಿದ್ದು, ತಮ್ಮದೇ ಆದ ಇಷ್ಟದೇವತೆಗಳ ಆರಾಧನೆಯು ಕಷ್ಟಸುಖಗಳ ಪರಿಹಾರಕ್ಕೆ, ರೋಗ ರುಜಿನಗಳನ್ನು ವಾಸಿ ಮಾಡುವ ಸಲುವಾಗಿಯೇ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಎಂತಹ ಸಂದರ್ಭದಲ್ಲೂ ತಮ್ಮ ನಂಬಿಕೆಗಳನ್ನು ಬಿಟ್ಟುಕೊಡದೇ ಸಂಪ್ರದಾಯ ಪ್ರಿಯರಾಗಿರುವುದನ್ನು ಏಕರೂಪದ ಸಂಸ್ಕೃತಿಯಲ್ಲಿ ಕಾಣಬಹುದಾಗಿದೆ. ಬುಡಕಟ್ಟು ಸಮುದಾಯಗಳು ತಮ್ಮದೇ ಆದ ನಂಬಿಕೆ ರೂಢಿ ಸಂಪ್ರದಾಯಗಳ ಎಲ್ಲೆಯೊಳಗೆ ಜೀವನ ನಡೆಸುತ್ತಿದ್ದವರು ಆದರೆ ಪ್ರಸ್ತುತ ಸನ್ನಿವೇಶವನ್ನು ನೋಡಿದಾಗ ಮೂಲ ಆಚರಣೆಗಳು ಕಣ್ಮರೆಯಾಗುತ್ತಿದ್ದು ಪುರೋಹಿತರ ಪ್ರವೇಶ ನಿಷಿದ್ಧವಿದ್ದ ಜಾಗದಲ್ಲಿ ನಾಗರಿಕತೆಯ ನೆಪದಲ್ಲಿ ಸತ್ಯನಾರಯಣ ಪೂಜೆಯು ಬುಡಕಟ್ಟು ಸಮುದಾಯದ ಮನೆಯೊಳಗೆ ಪ್ರವೇಶ ಪಡೆದಿದೆ ಎಂದರೆ ಅವರ ಏಕ ಸಂಸ್ಕೃತಿಯನ್ನು ಪ್ರಶ್ನಿಸುವಂತಿದೆ.

**ಒಂದೇ ರಾಜಕೀಯ ವ್ಯವಸ್ಥೆ**

ಬುಡಕಟ್ಟು ಸಮುದಾಯಗಳಲ್ಲಿ ರಾಜಕೀಯ ಎಂದಾಗ ತಮ್ಮ ಸಮುದಾಯದವರನ್ನು ಸರಿದಾರಿಗೆ ತರುವ ನಿಟ್ಟಿನಲ್ಲಿ ಶ್ರಮಿಸುವುದಾಗಿದೆ. ಅವರ ನಿಯಂತ್ರಣಕ್ಕಾಗಿ ತಮ್ಮ ಗುಂಪಿನಲ್ಲೇ ಅತ್ಯಂತ ಹಿರಿಯ ಮತ್ತು ಅನುಭವವಿರುವ ಒಬ್ಬ ವ್ಯಕ್ತಿಯನ್ನು ತಮ್ಮ ಗುಂಪಿನ ನಾಯಕನೆಂದು ಒಪ್ಪಿಕೊಂಡು ಅವನ ತೀರ್ಮಾನಗಳಿಗೆ ತಲೆ ಭಾಗುತ್ತಾರೆ. ಇಲ್ಲಿ ಸಾಮಾನ್ಯವಾಗಿ ಕುಲ ಪಂಚಾಯಿತಿಯ ತೀರ್ಮಾನವು ಅಂತಿಮವಾಗಿದ್ದು, ಕುಲದ ಯಜಮಾನನೇ ಸಮುದಾಯದ ನಾಯಕನಾಗಿದ್ದು, ತಪ್ಪು–ಒಪ್ಪು, ಶಿಕ್ಷೆ ಮತ್ತು ದಂಡಗಳನ್ನು ವಿಧಿಸುವ ಅಧಿಕಾರವನ್ನು ಹೊಂದಿರುತ್ತಾನೆ. ಇಡೀ ಸಮುದಾಯದ ಕಲ್ಯಾಣಕ್ಕಾಗಿ ತನ್ನ ಪಾತ್ರವೇನೆಂಬುದರ ಅರಿವಿರುವ ಯಜಮಾನನು ಇತರರಿಗೆ ಮಾದರಿಯಾಗಿ ಮತ್ತು ಗೌರವಯುತವಾಗಿ ನಡೆದುಕೊಳ್ಳುವವನಾಗಿರುತ್ತಾನೆ. ಸಮುದಾಯದ ಸದಸ್ಯರ ಆಗುಹೋಗುಗಳನ್ನು ಗಮನಿಸುವ ನಿಯಂತ್ರಿಸುವ ಅಧಿಕಾರವನ್ನು ಹೊಂದಿರುತ್ತಾನೆ. ಈ ಮಾದರಿಯ ಆಡಳಿತ ವ್ಯವಸ್ಥೆಯು ಬುಡಕಟ್ಟು ಸಮುದಾಯಗಳಲ್ಲಿ ಏಕ ರೀತಿಯಾಗಿ ಕಂಡುಬರುವುದನ್ನು ರಾಜಕೀಯ ವ್ಯವಸ್ಥೆಯಿಂದ ತಿಳಿದುಕೊಳ್ಳಬಹುದು. ಆದರೆ ಇಂದು ಪಕ್ಷಗಳ ಕಪಿಮುಷ್ಟಿಗೆ ಸಿಲುಕಿ ಯಜಮಾನ ಮಾತುಗಳು ಮತ್ತು ಅವನ ಆಜ್ಞೆಗಳನ್ನು ಚಾಚು ತಪ್ಪದೇ ಪಾಲಿಸುವುದು ಸಡಿಲಗೊಂಡತಿದೆ. ವಂಶಪಾರಂರೆಯಾಗಿದ್ದ ಮತ್ತು ಆ ಸಮುದಾಯದ ಅನುಭವಿ ಹಿರಿಯರಿಗೆ ಮೀಸಲಿದ್ದ ಯಜಮಾನಿಕೆಯು ಇಂದು ಬದಲಾದ ಅನ್ಯಕಾರಣಗಳಿಂದಾಗಿ ಯಜಮಾನನ ಆಯ್ಕೆಯು ಎರಡು ಅಥವಾ ಮೂರು ವರ್ಷಗಳಿಗೆ ಸೀಮಿತವಾಗಿ ಬೇರೆಯವರನ್ನು ಬಹುಮತದ ಮೂಲಕ ಆಯ್ಕೆ ಮಾಡುವ ಪ್ರವೃತಿಗಳು ಬೆಳಕಿಗೆ ಬಂದಿವೆ.

**ಸರಳ ಮತು ಸ್ವತಂತ್ರ ಜೀವನ**

ಬುಡಕಟ್ಟು ಸಮುದಾಯಗಳು ನಾಗರಿಕ ಸಮಾಜದಿಂದ ಹೊರಗುಳಿದಿರುವ ಸಮೂಹವಾಗಿದ್ದು, ಇವರು ಕಾಡಿನರಾಜನ ಮಕ್ಕಳಾಗಿದ್ದು, ಕಾಡಿನಲ್ಲಿ ಮುಕ್ತವಾಗಿ ಮತ್ತು ಸ್ವತಂತ್ರವಾಗಿ ಜೀವನ ನಡೆಸುವವರಾಗಿದ್ದು, ಪ್ರಾಣಿಗಳೊಂದಿಗೆ ಸಾಮರಸ್ಯ ಪ್ರಕೃತಿಯ ಮಡಿಲಲ್ಲಿನ ಹಾರೈಕೆಯನ್ನು ಪಡೆಯುತ್ತಾ ಸರಳ ಮತ್ತು ಸಜ್ಜನಿಕೆಯಿಂದ ಜೀವನ ಕಟ್ಟಿಕೊಂಡವರು. ಇವರು ತಮ್ಮ ಆಹಾರಕ್ಕಾಗಿ ಬೇಟೆಯಾಡುವುದು, ಮೀನು ಹಿಡಿಯುವುದು, ಅರಣ್ಯ ಉತ್ಪನ್ನಗಳ ಸಂಗ್ರಹಣೆಯು ವೃತ್ತಿಪರ ಕಸುಬಾಗಿತ್ತು. ಆದರೆ ಇಂದಿನ ಅರಣ್ಯ ನೀತಿಗಳಿಂದಾಗಿ ಅವರ ಸ್ವಚ್ಛಂದ ಬದುಕು ಉಸಿರುಗಟ್ಟಿ, ನಿಲ್ಲಲ್ಲು ನೆಲೆಯಿಲ್ಲದೆ ಅಲೆಮಾರಿಗಳಾಗಿ ಅಲೆಯುತ್ತಿರುವುದು ಅವರ ಸರಳ ಮತ್ತು ಸ್ವತಂತ್ರ ಜೀವನಕ್ಕೆ ಕೊಡಲಿ ಪೆಟ್ಟು ನೀಡಿದಂತಾಗಿ, ಅನಾಥ ಪ್ರಜ್ಞೆ ಮೂಡಿಸಿರುವುದು ಇವರ ಅಸಹಾಯಕತೆಗೆ ಹಿಡಿದ ಕನ್ನಡಿಯಾಗಿದೆ.

**ಐಕ್ಯತೆ ಮತ್ತು ರಕ್ಷಣೆ**

ಪ್ರತಿಯೊಂದು ಬುಡಕಟ್ಟು ಸಮುದಾಯದಲ್ಲಿ ಐಕ್ಯತಾ ಭಾವನೆಯು ಎದ್ದು ಕಾಣಿಸುತ್ತದೆ. ಒಬ್ಬರಿಗೊಬ್ಬರು ಐಕ್ಯತೆಯಿಂದ ಸಹಬಾಳ್ವೆಯನ್ನು ನಡೆಸುವವರಾಗಿದ್ದು, ಬುಡಕಟ್ಟು ಸಮುದಾಯಗಳು ಕಾಡಿನಲ್ಲಿ ವಾಸವಾಗಿರುವುದರಿಂದ ಸಮುದಾಯದ ಮೇಲೆ ಎರಗುವ ಗಂಡಾತರಗಳಿಂದ ತಪ್ಪಿಸಿಕೊಳ್ಳಲು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಒಗ್ಗಟ್ಟಿನಿಂದ ಶಕ್ತಿ ಪ್ರದರ್ಶನ ಮಾಡುತ್ತಾರೆ. ಅಂದರೆ ಕಷ್ಟ ಕಾರ್ಪಣ್ಯಗಳು ಎದುರಾದಾಗ, ಪ್ರಕೃತಿ ವಿಕೋಪಗಳು ಒದಗಿದಾಗ, ಕಾಡು ಪ್ರಾಣಿಗಳ ಹಾವಳಿ ಹಾಗೂ ಇತರ ಸಮುದಾಯದವರು ತಮ್ಮ ಮೇಲೆ ಆಕ್ರಮಣವೆಸಗಿದಾಗ ಇವರಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಬಹುಮುಖ್ಯ ಪಾತ್ರವಹಿಸುತ್ತದೆ. ಎಂತಹ ಸಂದರ್ಭದಲ್ಲೂ ತ್ಯಾಗ ಬಲಿದಾನಗಳಿಗೂ ಸಿದ್ಧರಿರುವುದು ಇವರ ಸಮುದಾಯದ ಐಕ್ಯತೆ, ರಕ್ಷಣೆ ಮತ್ತು ಭದ್ರತೆಯನ್ನು ತೋರಿಸುತ್ತದೆ. ಪ್ರಸ್ತುತ ಸನ್ನಿವೇಶದಲ್ಲಿ ಆರ್ಥಿಕ ಜೀವನವು ಹದಗೆಟ್ಟು ನಗರ ಜೀವನವು ಕಷ್ಟಕರ ಸನ್ನಿವೇಶವನ್ನು ನಿರ್ಮಾಣಮಾಡಿದೆ. ಇಲ್ಲಿ ಹಲವು ಬುಡಕಟ್ಟು ಸಮುದಾಯಗಳು ಕುಲಕಸುಬುಗಳನ್ನು ಮುಂದುವರೆಸಲು ಅನುಕೂಲಕರ ವಾತವರಣದ ಕೊರತೆಯಿಂದಾಗಿ ಅಂದರೆ ಏಕಲವ್ಯನಗರದಲ್ಲಿರುವ ಬುಡಟ್ಟು ಜನರಿಗೆ ಬಹುಮಹಡಿಗಳ ಕಟ್ಟಡದಲ್ಲಿ ಸರ್ಕಾರದ ವತಿಯಿಂದ ಮನೆಗಳನ್ನು ನೀಡಿದ್ದರೂ ಸಹ ಅವರು ಅಲ್ಲಿಗೆ ಹೋಗಲು ನಿರಾಕರಿಸುವಂತಹ ಸಂದರ್ಭ ಸೃಷ್ಟಿಯಾಗಿದೆ. ಉದಾ ಕೋಲೆಬಸವ ಸಮುದಾಯದವರು ತಮ್ಮ ಬಸವನನ್ನು ಎಲ್ಲಿ ಸಾಕುವುದು ಎಂಬ ಆತಂಕಕ್ಕೆ ಒಳಗಾಗಿರುವುದು ಮತ್ತು ಹೊರಾಂಡದಲ್ಲಿ ಕಟ್ಟುಹಾಕಿದರೆ ಇತರೆ ಬುಡಕಟ್ಟು ಸಮುದಾಯದವರು ಗಲೀಜು ಮಾಡುತ್ತದೆ ಎಂಬ ಕಾರಣಕ್ಕೆ ಜಗಳ ಮಾಡುತ್ತಾರೆ ಎಂದು ತಮ್ಮ ಅಳಲನ್ನು ತೊಡಿಕೊಂಡರೆ ಮೇದರು ಬಿದುರಿನ ಬೆಲೆ ಏರಿಕೆ ಮತ್ತು ತಾವು ತಯಾರಿಸಿದ ಬಿದಿರಿನ ಪರಿಕರಗಳಿಗೆ ಸರಿಯಾದ ಬೆಲೆ ಸಿಗದೆ ಕಷ್ಟಕರ ಜೀವನ ನಡೆಸುವ ಪರಿ ಅಲ್ಲದೆ ಚುಂಚರು, ದೊಂಬರು, ಬುಡಬುಡಕಿ ಮತ್ತು ಹಕ್ಕಿಪಿಕ್ಕಿಯವರ ಕುಲಕಸುಬುಗಳ ಬಗ್ಗೆ ನೋಡಿದರೆ ನಗರ ಜೀವನದಲ್ಲಿ ಅವರ ಅಸಹಾಯಕತೆಯ ಯಶೋಗಾಥೆಯು ತುಂಬ ಕ್ಲಿಷ್ಟಕರವಾಗಿರುವುದು ಮತ್ತು ನಗರ ಪ್ರದೇಶಗಳಲ್ಲಿ ದಿನನಿತ್ಯಯ ಅವರ ಪರದಾಟ ಕಣ್ಣಿಗೆ ಕಟ್ಟಿದಂತಿದೆ. ಈ ಸನ್ನಿವೇಶದಲ್ಲಿ ಸಾಮುದಾಯಿಕತೆಗೆ ಮತ್ತು ಒಗ್ಗಟ್ಟಿಗೆ ಅವರ ಒಪ್ಪತ್ತಿನ ಕೂಳಿನ ಪರದಾಟವು ತಡೆಯುಂಟ್ಟು ಮಾಡಿರುವುದು ಅವರ ಆರ್ಥಿಕ ಭದ್ರತೆಗೆ ಕೊಡಲಿಪೆಟ್ಟು ನೀಡಿದಂತಾಗಿದೆ.

**ವಿವಾಹ ಪದ್ಧತಿ**

ಬುಡಕಟ್ಟು ಸಮುದಾಯಗಳಲ್ಲಿ ವಿವಾಹ ಪದ್ಧತಿಯು ವೈಶಿಷ್ಟ್ಯದಿಂದ ಕೂಡಿದ್ದು, ವಿವಾಹದ ವಯಸ್ಸು, ವಧು–ವರರ ಆಯ್ಕೆ, ವಿವಾಹದ ವಿಧಾನ, ವಿಚ್ಛೇದನ ಮತ್ತು ಲೈಂಗಿಕ ನಿಯಮಗಳ ಬಗ್ಗೆ ತಮ್ಮದೇ ಆದ ನೀತಿ ನಿಯಮಗಳನ್ನು ಹೊಂದಿದ್ದಾರೆ. ಅದರಲ್ಲೂ ತಮ್ಮ ಸಮುದಾಯವಲ್ಲದವರನ್ನು ವಿವಾಹವಾಗುವುದು ನಿಷಿದ್ಧವಾಗಿದ್ದು, ತಮ್ಮ ರಕ್ತಸಂಬಂಧಿಕರನ್ನು ವಿವಾಹವಾಗುವುದಿಲ್ಲ. ಜೊತೆಗೆ ವಿವಾಹವು ಅನೇಕ ಬಗೆಯದ್ದಾಗಿದ್ದು, ಅಪಹರಣ ವಿವಾಹ, ವಿನಿಮಯ ವಿವಾಹ, ಜೀತ ವಿವಾಹ, ಮೈದುನ ವಿವಾಹ, ಏಕಪತ್ನಿತ್ವ ಹಾಗೂ ಬಹುಪತ್ನಿತ್ವ ಮತ್ತು ವಿಧವಾ ವಿವಾಹ ಮುಂತಾದವುಗಳಾಗಿದ್ದು, ವಿವಾಹಪೂರ್ವ ಮತ್ತು ವಿವಾಹೇತರ ಲೈಂಗಿಕ ಸಂಬಂಧಗಳ ಮೇಲೆ ಕಟ್ಟುನಿಟ್ಟಿನ ನಿರ್ಬಂಧಗಳಿರುವುದಿಲ್ಲ. ಅಕ್ರಮ ಸಂಬಂಧಗಳು ಅಥವಾ ವಿವಾಹ ಪೂರ್ವದಲ್ಲಿನ ಲೈಂಗಿಕ ಸಂಬಂಧಗಳಿಗೆ ಕುಲದಿಂದ ದಂಡವಿಧಿಸಿ ವಿವಾಹಗೊಳಿಸುವ ಪದ್ಧತಿ ರೂಢಿಯಲ್ಲಿದ್ದು, ಅವರನ್ನು ಕುಲಕ್ಕೆ ಸೇರಿಸಿಕೊಳ್ಳುವ ಪದ್ಧತಿಯನ್ನು ಬುಡಕಟ್ಟು ಸಮುದಾಯದವರಲ್ಲಿ ಕಾಣಬಹುದಾಗಿದೆ. ಹಾಗೆಯೇ ಅಂತರ ಜಾತಿಯ ವಿವಾಹಕ್ಕೆ ನಿಷೇಧವಿದ್ದು ಒಂದು ವೇಳೆ ನಡೆದರೆ ಅವರನ್ನು ತಮ್ಮ ಕುಲಕ್ಕೆ ಸೇರಿಸಿಕೊಳ್ಳದೆ ಅವರನ್ನು ಸಮಾಜದಿಂದ ಬಹಿಷ್ಕರಿಸುವ ಪದ್ಧತಿ ಇಂದಿಗೂ ಸಹ ಅರಣ್ಯ ಅಂಚಿನ ಬುಡಕಟ್ಟು ಸಮುದಾಯದವರಲ್ಲಿ ಕಾಣಬಹುದು. ಆದರೆ ನಗರಪ್ರದೇಶದಲ್ಲಿ ಅಂತರ್ಜಾತಿ ವಿವಾಹವನ್ನು ಒಪ್ಪಿಕೊಂಡಿರುವುದು ಮೈಸೂರು ನಗರದ ಬುಡಕಟ್ಟು ಸಮುದಾಯಗಳಲ್ಲಿ ಕಂಡುಬರುತ್ತದೆ. ಇವರು ಕುಲದ ನಡುವೆಯೇ ಜೀವನ ನಡೆಸುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸೋಲಿಗ ಸಮುದಾಯವನ್ನು ಸಂಪರ್ಕಿಸಿದಾಗ ಕಂಡುಬಂದಿದ್ದನ್ನು ದಾಖಲಿಸಿಕೊಳ್ಳಲಾಯಿತು.

**ಉಪಸಂಹಾರ**

ಈ ಮೇಲಿನ ಎಲ್ಲ ಲಕ್ಷಣಗಳನ್ನು ಬುಡಕಟ್ಟು ಸಮುದಾಯಗಳು ಸ್ವಲ್ಪ ಮಟ್ಟಿಗೆ ವಿಸ್ತರಿಸಿಕೊಂಡು, ಉಳಿಸಿಕೊಂಡು ಮತ್ತು ಅನಿವಾರ್ಯ ಸಂಧರ್ಭಗಳಲ್ಲಿ ಬದಲಾವಣೆಗಳನ್ನು ಕಾಣುತ್ತಾ, ನಾಗರಿಕ ಸಮಾಜದ ನಡುವೆ ಉಳಿದರೂ ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಅನುಸರಿಸಿಕೊಂಡು, ಉಳಿಸಿಕೊಂಡು ಮತ್ತು ಪೋಷಿಸಿಕೊಂಡು ಬಂದಿರುವುದನ್ನು ಗಮನಿಸಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಂಗಡಿ, ಎಸ್.ಎಸ್. (2008). ಕರ್ನಾಟಕ ಬುಡಕಟ್ಟು ಭಾಷೆ: ಮಾನವಶಾಸ್ತ್ರ ಅಧ್ಯಯನ. ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು.
- ಚಂದ್ರಪ್ಪ. ಬಿ. ಎನ್. (1990). ಸೋಲಿಗರ ಒಂದು ಅಧ್ಯಯನ, ಪಿ. ಹೆಚ್. ಡಿ. ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಚಂದ್ರು ಕಾಳೇನಹಳ್ಳಿ, ಸೋಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯಅಕಾಡೆಮಿ, ಬೆಂಗಳೂರು, 2011.

- ಕೃಷ್ಣ ಅಯ್ಯಂಗಾರ್. ಡಿ. (1956). ಕನ್ನಡ ನಾಡಿನ ಆದಿವಾಸಿಗಳು. (ಮೈಸೂರು ರಾಜ್ಯ). ವಾರ್ತೆ ಇಲಾಖೆ, ಮೈಸೂರು ಸರ್ಕಾರ ಬೆಂಗಳೂರು, 1956. ಪು.ಸಂ. 497.
- ತಾರಿಹಳ್ಳಿ ಹನುಮಂತಪ್ಪ (2010). ಕರ್ನಾಟಕ ಬುಡಕಟ್ಟು ಸಮುದಾಯಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2010
- ಶ್ರೀಕಾಂತ್. ಎಸ್ (2002). ಕರ್ನಾಟಕ ಮೂಲನಿವಾಸಿ ಬುಡಕಟ್ಟುಗಳು: ಅವರ ಬದುಕು ಮತ್ತು ಸಂಕಷ್ಟಗಳು. ಇಲ್ಲಿ ಸ್ವಾವಲಂಬನೆಯತ್ತ ಗ್ರಾಮೀಣ ಜನ ಸಮುದಾಯಗಳು, ಸ್ಮರಣ ಸಂಚಿಕೆ, ಫೆವಾರ್ಡ್–ಕರ್ನಾಟಕ. ಬೆಂಗಳೂರು. ಪು.ಸಂ. 1–8
- ಮಧು ಗುಂಡ್ಲುಪೇಟೆ (2002). ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ. ಅಕ್ಷತಾ ಪ್ರಕಾಶನ, ಮೈಸೂರು.
- ಮಾನಸ (1993.) ಕೊರವರ ಸಂಸ್ಕೃತಿ, ಇಲ್ಲಿ ಬರಗೂರು ರಾಮಚಂದ್ರಪ್ಪ (ಸಂ). ಉಪಸಂಸ್ಕೃತಿ ಅಧ್ಯಯನ ಯೋಜನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಮಂಜುನಾಥ ಬೆಂಡರವಾಡಿ. (2010). ಚಾಮರಾಜ ನಗರ ಜಿಲ್ಲೆಯ ಆದಿವಾಸಿಗಳು: ಒಂದು ಪಕ್ಷಿನೋಟ. ಇಲ್ಲಿ ಮಧು ಗುಂಡ್ಲುಪೇಟೆ (ಸಂ). ಬುಡಕಟ್ಟು ಲೇಖನಗಳು. ಅಕ್ಷತಾ ಪ್ರಕಾಶನ, ಮೈಸೂರು.
- ಮಂಜುನಾಥ ಬಿ.ಆರ್. (2014). ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳು: ಒಂದು ಮಾನವಶಾಸ್ತ್ರ ಅಧ್ಯಯನ, ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ, ಮೈಸೂರು ವಿವಿ, ಮೈಸೂರು.
- ಉಮೇಶ್, ಮೈಸೂರು. (2012). ಕ್ಯಾತಮಾರನಹಳ್ಳಿ ಒಂದು ಸಾಂಸ್ಕೃತಿಕ ಅಧ್ಯಯನ, ಹೊನ್ನಾಡು ಜನಪದಗಾಯಕರು, ಮೈಸೂರು.